

## ಕರ್ನಾಟಕದ ಅತಿ ಉದ್ದದ ಫಿರಂಗಿ

ಬಹಮನಿ ಸುಲ್ತಾನರು ಮತ್ತು ವಿಜಯನಗರದಂತಹ ವಿವಿಧ ಸಾಮ್ರಾಜ್ಯಗಳ ಭಾಗವಾಗಿದ್ದ ರಾಯಚೂರು ಶ್ರೀಮಂತ ಇತಿಹಾಸವನ್ನು ಹೊಂದಿದೆ. ಇಲ್ಲಿನ ಅನೇಕ ವಿಚಾರಗಳು ಇತಿಹಾಸ ಪುಟ ಸೇರಿವೆ. ಈ ಚಿತ್ರದಲ್ಲಿ ಕಾಣುತ್ತಿರುವ ಫಿರಂಗಿಯು ಕರ್ನಾಟಕದ ಅತಿ ಉದ್ದದ್ದು ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ರಾಯಚೂರು ಕೋಟೆಯಲ್ಲಿ ಇರುವ ಈ ಫಿರಂಗಿಯು 13ನೇ ಶತಮಾನದ ಬಹಮನಿಗಳಿಂದ ನಿರ್ಮಿಸಲಾಗಿದೆ. ಇದು ಒಂದೂವರೆ ಅಡಿಯಿಂದ ಎರಡು ಅಡಿ ವ್ಯಾಸದ ಬ್ಯಾರೆಲ್‌ಗಳೊಂದಿಗೆ 24 ಅಡಿ ಉದ್ದವಿರುವ ಈ ಫಿರಂಗಿ ಉತ್ತಮ ಗುಣಮಟ್ಟದ ಕಬ್ಬಿಣದಿಂದ ಮಾಡಲಾಗಿದೆ. ಇದನ್ನು ಕಮ್ಮಾರಿಕೆ ಕೆಲಸದಿಂದ ತಯಾರಿಸಲಾಗಿದೆ ಎಂದು ಇತಿಹಾಸದಲ್ಲಿ ಹೇಳಲಾಗಿದೆ. ಬೋರ್ ವ್ಯಾಸವು 6 ಇಂಚುಗಳಷ್ಟು ಇದ್ದು. ಈ ಫಿರಂಗಿಯು 20 ಕಿಲೋಗ್ರಾಂ ಸಿಡಿಮದ್ದನ್ನು ಹಾರಿಸುವ ಹಾಗೂ 5 ರಿಂದ 6 ಕಿಲೋಮೀಟರ್ ದೂರ ಹಾರುವ ಸಾಮರ್ಥವನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ.

—ವಿಜಯ್‌ಕುಮಾರ್ ಹೆಚ್. ಕೆ., ರಾಯಚೂರು



## ಅಡಿಕೆ ಪುರೋಹಿತರು

ಇತ್ತೀಚೆಗೆ ಮದುವೆ ಮನೆಗಳು ಕ್ರಿಯಾಶೀಲತೆಯ ಅಭಿವ್ಯಕ್ತಿಗೆ ಉತ್ತಮ ವೇದಿಕೆಯಾಗುತ್ತಿವೆ. ಈ ಚಿತ್ರದಲ್ಲಿ ಕಾಣುತ್ತಿರುವುದೂ ಅಂತಹದ್ದೇ ಒಂದು ಕ್ರಿಯಾಶೀಲತೆಗೆ ಹಿಡಿದ ಕನ್ನಡಿ. ಮದುವೆಯೊಂದರಲ್ಲಿ ಅಲಂಕಾರಿಕವಾಗಿ ಇಟ್ಟಿದ್ದ ಅಡಿಕೆ ಗುಂಡುಗಳ ಪುರೋಹಿತ ವರ್ಗ. ಇದನ್ನು ತಯಾರಿಸಿದ್ದು ಶಿವಮೊಗ್ಗದ ಕಮ್ಮಚ್ಚಿಯ ಶಾಂಭವಿ ಅವರು. ಈ ಮುದ್ದಾದ ಪುಟಾಣಿ ಪುರೋಹಿತರುವೇದ ಮಂತ್ರಗಳೊಂದಿಗೆ ವಿವಾಹದ ಪೌರೋಹಿತ್ಯವನ್ನು ತಾವೇ ವಹಿಸಿಕೊಂಡು ಕಾರ್ಯ ನೆರವೇರಿಸಿದರು ಎಂಬ ಭಾವವನ್ನು ಬೀರುತ್ತವೆ.

—ಉಮಾ ಶಿವಶಂಕರ್, ಶಿವಮೊಗ್ಗ